ಸಾರಿ ಸಿಟ್ಟು ಬಂದು ಬಿಡುತ್ತದೆ. ಕೋಪವೆಂಬುದು ಅನರ್ಥ ಸಾಧನ; ಕೋಪವೇ ಸಂಸಾರ ಬಂಧನ, ಕೋಪದಿಂದ ಉರಿತರವೋ ಸುಕೃತವೋ ನಯವ ನೈವುದಿಷ್ಟು ಎಂದು. ಕೋಪದಿಂದ ಉರಿತರ ಸುಕೃತವೂ, ನಯನ ನೈಯವುನೈದಿಷ್ಟು.

ಡಾ. ಜೀವರಾಜ್ ಆಳ್ವ :- ಮಾನ್ಯ ಈಶ್ವರಪ್ಪನವರ ಕೈಯಲ್ಲಿ ಇಂಟರೀಂ ರಿಪೋರ್ಟ್ ಇದೆ. ಅದನ್ನು ಏತಕ್ಕೆ ಟೇಬಲ್ ಮಾಡುವುದಿಲ್ಲ? It is a basic fact. If it is availabe with a member, why is it not been placed before the House?

ಶ್ರೀ ಕೆ.ಹೆಚ್.ರಂಗನಾಥ್ :- ಸರ್ಕಾರ ಮಾಡುವುದಿಲ್ಲ ಎಂದು ಹೇಳಲಿಲ್ಲ. ಅವರು ನಿಲುವಳಿ ಸೂಚನೆಯನ್ನು ಪ್ರಸ್ತಾಪ ಮಾಡಿದರು; ಅದು ನಿಲುವಳಿ ಸೂಚನೆಯ ವ್ಯಾಪ್ತಿಯಲ್ಲಿ ಇದು ಬರುವುದಿಲ್ಲ ಎಂದು ಹೇಳುತ್ತಿದ್ದೆ. ಮಾನ್ಯ ಮುಖ್ಯಮಂತ್ರಿಗಳು ಬಂದಿಲ್ಲ. We do not say anything. ಆದ್ದರಿಂದ ಸರ್ಕಾರ ಇಡುವುದಿಲ್ಲ ಎಂದು ಹೇಳಲಿಲ್ಲ. ಎಲ್ಲಿ ಹೇಳಿದೆ? ಮುಖ್ಯಮಂತ್ರಿಗಳ ವ್ಯಾಪ್ತಿಯೊಳಗೆ ಬರುತ್ತದೆ; ಅವರು ಬಂದಮೇಲೆ ತಾವು ಪ್ರಸ್ತಾಪವನ್ನು ಮಾಡಿದರೆ ಅವರು ಹೇಳಬಹುದು. ನಾವು ಇಡುವುದಿಲ್ಲ ಅಂತ ಹೇಳಿಲ್ಲ. ಏನೂ ಕಾರಣ ಇಲ್ಲದೆ ನಾವು ಮಾತನಾಡುತ್ತಾ ಹೋದರೆ ಹೇಗೆ?

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ :- ಈ ರೀತಿ ನಡೆಯುತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ಬಂದ ತಕ್ಷಣ ತೆಗೆದುಕೊಂಡು....

(ಗೊಂದಲ)

ಶ್ರೀಮತಿ ದಮಯಂತಿ ಜೋರೇಗೌಡ :- ಈ ವಿಷಯವನ್ನು ಇಲ್ಲಿಗೆ ಮುಗಿಸಿ.

(ಗೊಂದಲ)

ಅಧ್ಯಕ್ಷರು :- ಮಾನ್ಯ ವಾಟಾಳ್ ನಾಗರಾಜ್‌ರವರೇ, ಅದು ಮುಕ್ತಾಯವಾಗಿದೆ.

ಶ್ರೀ ವಾಟಾಳ್ ನಾಗರಾಜ್ :- ಮಧ್ಯಂತರ ವರದಿ ಇದ್ದರೆ ಅದನ್ನು ಮಂಡಿಸಲಿ. ಅದರ ಬಗ್ಗೆ ಚರ್ಚೆ ಮಾಡೋಣ.

(ಗೊಂದಲ)

ಅಧ್ಯಕ್ಷರು :- ಪ್ರಸ್ತಾವನೆ ಯಾವುದೂ ಆಗುವುದಿಲ್ಲ. ಯಾವುದೂ ರೆಕಾರ್ಡಿನಲ್ಲಿ ಹೋಗುವುದಿಲ್ಲ. ದಯವಿಟ್ಟು ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಸಿ. ಬೈರೇಗೌಡ :- ಇವತ್ತು ಇಷ್ಟು ಹೊತ್ತು ಮಾತನಾಡಿರುವುದಕ್ಕೆ ಅರ್ಥವಿಲ್ಲ. ಪತ್ರಿಕೆಯಲ್ಲಿ ವರದಿ ಆಗಿರತಕ್ಕಂಥದ್ದು ಏನು ಎಂಬುದನ್ನು ತಾವು ನೋಡಿ. ಬೇರೆ ವಿಷಯ ಈಗ ಪ್ರಸ್ತಾಪವಾಗಿಲ್ಲ.

(ಗೊಂದಲ)

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ವಿಷಯ :- ಮಹಿಳೆಯರ ಮೇಲೆ ಆಗುತ್ತಿರುವ ಅತ್ಯಾಚಾರ, ದೌರ್ಜನ್ಯಗಳ ಬಗ್ಗೆ

ಶ್ರೀಮತಿ ರೇಣುಕಾ ರಾಜೇಂದ್ರನ್ (ಚಿಕ್ಕಬಳ್ಳಾಪುರ) :- ಮಾನ್ಯ ಅಧ್ಯಕ್ಷರೆ, ನಿಯಮಾವಳಿಗಳ ಪ್ರಕಾರ ಸದನ ಏಕೋ ನಡೆಯುತ್ತಿಲ್ಲ ಅಂತ ನಮಗೆ ಅನ್ನಿಸಿದ್ದರ ಮೇರೆಗೆ ನಾವು ಕೂಗಾಡುವುದಕ್ಕೆ

ಎದ್ದುನಿಂತುಕೊಂಡಿದ್ದೇವೆ. ಅತ್ಯಂತ ಗಹನವಾದಂತಹ ವಿಚಾರ ಇತ್ತೀಚಿನ ದಿನಗಳಲ್ಲಿ ಹಗಲೆಲ್ಲಾ ಪದೇಪದೇ ಮರುಕಳಿಸುತ್ತಿರತಕ್ಕಂಥ ಮಹಿಳೆಯರ ಮೇಲಿನ ಅತ್ಯಾಚಾರ, ಮಹಿಳೆಯರ ಮೇಲಿನ ದೌರ್ಜನ್ಯಗಳ ಬಗ್ಗೆ ನಾನು ನಿನ್ನೆ ತಮಗೆ ಲಿಖಿತದಲ್ಲಿ ಕಾಗದವನ್ನು ಬರೆದು ಕಳುಹಿಸಿಕೊಟ್ಟಿದ್ದೆ. ತಾವು ಅರ್ಧಗಂಟೆಯ ಚರ್ಚೆಗೆ ಅವಕಾಶವನ್ನು ಕೊಡಬೇಕು. ಇಲ್ಲದೆ ಇದ್ದರೆ ನಾವು ಬೇರೆ ಯಾವುದಾದರೂ ರೂಪದಲ್ಲಿ ಪ್ರಸ್ತಾಪ ಮಾಡಲು ಅವಕಾಶ ಕೊಡಬೇಕೆಂದು ತಮಗೆ ಬರೆದು ಕಳುಹಿಸಿಕೊಟ್ಟಿದ್ದೇವೆ. ಇವತ್ತಿನ ದಿವಸ ಹಾನಗಲ್ ತಾಲ್ಲೂಕಿನ ಹುಲ್ಲಕ್ಕಿ ಗ್ರಾಮದಲ್ಲಿ ಶ್ರೀಮತಿ ಕಮಲಮ್ಮ ಎಂಬ ಅಂಗನವಾಡಿ ಕಾರ್ಯಕರ್ತೆಯನ್ನು ನಿರ್ವಸ್ತ್ರ ಮಾಡಿ ಆಕೆಗೆ ಅಪಮಾನವನ್ನು ಅದೇ ಊರಿನ ಕೆಲವು ವ್ಯಕ್ತಿಗಳು ಮಾಡಿದ್ದಾರೆ. ಅದರ ಬಗ್ಗೆ ಇದುವರೆಗೂ ಯಾವುದೇ ವಿಧವಾದಂತಹ ಕ್ರಮವನ್ನು ಪೋಲೀಸಿನವರಾಗಲಿ ಅಥವಾ ಬೇರೆ ಇಲಾಖೆಯವರಾಗಲೀ ತೆಗೆದುಕೊಂಡಿಲ್ಲ ಎನ್ನತಕ್ಕ ವರದಿ ನಮಗೆ ಬಂದಿದ್ದರಿಂದ ನಾವು ಈ ವಿಷಯದ ಪ್ರಸ್ತಾಪಕ್ಕೆ ತಾವು ಯಾವ ರೀತಿ ಅವಕಾಶವನ್ನು ಮಾಡಿಕೊಡುತ್ತೀರಿ ಎನ್ನತಕ್ಕಂಥದ್ದರ ಬಗ್ಗೆ ತಮ್ಮಿಂದ ಉತ್ತರವನ್ನು ನಿರೀಕ್ಷೆಯನ್ನು ಮಾಡುತ್ತೇನೆ.

ಅಧ್ಯಕ್ಷರು :- ತಾವು ಶೂನ್ಯವೇಳೆಯಲ್ಲಿ ಅವಕಾಶವನ್ನು ಮಾಡಿಕೊಡಿ ಎಂದು ಕೇಳಿದ್ದೀರಿ, ನಾನು ಅವಕಾಶವನ್ನು ಮಾಡಿಕೊಟ್ಟಿದ್ದೇನೆ. ತಾವು ಪ್ರಸ್ತಾಪ ಮಾಡಿ.

ಶ್ರೀಮತಿ ರೇಣುಕಾರಾಜೇಂದ್ರನ್ :- ತಾವು ಅವಕಾಶವನ್ನು ಕೊಟ್ಟಿದ್ದೀರಿ, ಆದರೆ ಈಗ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇಲ್ಲ; ಹಾಗೂ ಗೃಹಮಂತ್ರಿಗಳು ಇಲ್ಲ, ನಾವು ಇಲ್ಲಿ ಪ್ರಸ್ತಾಪವನ್ನು ಮಾಡಿದರೆ ಉತ್ತರವನ್ನು ನಮಗೆ ಯಾರು ಹೇಳುತ್ತಾರೆ?

ಅಧ್ಯಕ್ಷರು :- 3-4 ಜನ ಮಾನ್ಯ ಮಂತ್ರಿಗಳು ಇದ್ದಾರೆ. ತಾವು ಪ್ರಸ್ತಾವನೆಯನ್ನು ಮಾಡಿ, ಸರ್ಕಾರದಿಂದ ಉತ್ತರ ಹೇಳುತ್ತಾರೆ.

ಶ್ರೀಮತಿ ರೇಣುಕಾರಾಜೇಂದ್ರನ್ :- ಇದು ಪತ್ರಿಕೆಯಲ್ಲಿ ಬಂದಿದೆ. ನಾನು ಅದನ್ನು ತಮಗೆ ಕಳುಹಿಸಿಕೊಡುತ್ತಿದ್ದೇನೆ. ಅಲ್ಲಿನ ಲೋಕಲ್ ಪತ್ರಿಕೆಯಲ್ಲಿ ವರದಿ ಬಂದಿದೆ. ಇದನ್ನು ನೋಡಿ ನಮಗೂ ಸಹ ಮನಸ್ಸಿಗೆ ನೋವಾಗಿದೆ; ತಮಗೆ ಇದನ್ನು ನಾನು ಕಳುಹಿಸಿಕೊಡುತ್ತಿದ್ದೇನೆ. ತಾವು ಇದನ್ನು ಪರಾಂಭರಿಸಬಹುದು. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆಂಬುದನ್ನು ಹೇಳಬೇಕು.

ಶ್ರೀ ಧರ್ಮಸಿಂಗ್ :- ಮಾನ್ಯ ಸದಸ್ಯರಿಯವರು ಪ್ರಸ್ತಾಪ ಮಾಡಿದಹಾಗೆ ಹಾನಗಲ್‌ನಲ್ಲಿ ಅಂಗನವಾಡಿ ಕಾರ್ಯಕರ್ತೆಯ ಮೇಲೆ ದೌರ್ಜನ್ಯವಾಗಿದೆ, ಇಲ್ಲಿಯವರೆಗೂ ಪೋಲೀಸ್ ಇಲಾಖೆಯವರು ಮತ್ತು ಯಾವ ಇಲಾಖೆಯವರೂ ಹೋಗಿ ಅಲ್ಲಿ ಏನು ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳಿದ್ದಾರೆ. ಈ ಬಗ್ಗೆ ಫೋನಿನ ಮುಖಾಂತರ ಧಾರವಾಡ ಜಿಲ್ಲೆಯಿಂದ ವರ್ತಮಾನ ಬಂದಿದೆ. ಈಗಾಗಲೇ ಡೈರೆಕ್ಟರ್ ಆಫ್ ವುಮನ್ ಅಂಡ್ ಚಿಲ್ಡ್ರನ್ ವೆಲ್‌ಫೇರ್‌ರವರಾದ ರತ್ನಪ್ರಭ ಅವರಿಗೂ ಹೇಳಿದ್ದೇನೆ. ಅವರೂ ಕೂಡ ಸಂಪರ್ಕಿಸಿದ್ದಾರೆ. ನಾನೂ ಕೂಡ ಜಿಲ್ಲಾಧಿಕಾರಿಗಳಿಗೆ ಯಾರು ತಪ್ಪಿತಸ್ಥರು ಇದ್ದಾರೆ, ಅವರ ಮೇಲೆಕ್ರಮ ತೆಗೆದುಕೊಳ್ಳತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿದ್ದೇನೆ.

SMT. DAMAYANTHI BORE GOWDA :- What isthe Home Department doing? ರತ್ನಪ್ರಭರವರು ವುಮನ್ ಅಂಡ್ ಚಿಲ್ಡ್ರನ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಿಂದ ಹೋಗುತ್ತಾರೆ. ನಿಮ್ಮ ಪೋಲೀಸಿನವರು ಏನು ಮಾಡುತ್ತಿದ್ದಾರೆ?

ಶ್ರೀ ಧರ್ಮಸಿಂಗ್ :- ಅಲ್ಲಿರತಕ್ಕಂಥ ಜಿಲ್ಲಾಪೋಲೀಸ್ ಅಧಿಕಾರಿಗಳಿಗೂ ಕೂಡ ನಾವು ಹೇಳಿ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀಮತಿ ದಮಯಂತಿ ಬೋರೇಗೌಡ :- ಇಂತಹ ಪ್ರಕರಣಗಳು ನಿರಂತರವಾಗಿ ಬಡ ಮಹಿಳೆಯವರು ಅದೂ ಅಂಗನವಾಡಿ ಕಾರ್ಯಕರ್ತೆಯ ಮೇಲೆ ನಡೆಯುತ್ತಲೇ ಇರುತ್ತದೆ. ಇಂತಹ ರಾಕ್ಷಸರನ್ನು ಅರೆಸ್ಟ್ ಮಾಡಿ,ಕೇಸ್ ದಾಖಲು ಮಾಡಿ ಅವರ ಮೇಲೆ ಕಠಿಣವಾದ ಕ್ರಮ ತೆಗೆದುಕೊಳ್ಳುವ ಕೆಲಸ ಏನು ಆಗುತ್ತಿಲ್ಲ. ಈ ಕೇಸ್‌ಗಳನ್ನು ಡೈಲೂಟ್ ಮಾಡುವಂತಹ ಪ್ರಯತ್ನಗಳೂ ಕೂಡ ಆಗುತ್ತಿದೆ. ಇದರ ಬಗ್ಗೆ ಸರ್ಕಾರ ಕಠಿಣವಾದ ಒಂದು ಕ್ರಮವನ್ನು ತೆಗೆದುಕೊಳ್ಳಬೇಕು.

ಶ್ರೀ ಪಿ.ಜಿ.ಆರ್.ಸಿಂಧ್ಯ :- ನಾವೆಲ್ಲಾ ಅದರ ಬಗ್ಗೆ ಕಳುಹಿಸಿದ್ದೇವೆ. ಮುಖ್ಯಮಂತ್ರಿಗಳೇ ಅದಕ್ಕೆ ಉತ್ತರ ಕೊಡಬೇಕು.

ಶ್ರೀ ಧರ್ಮಸಿಂಗ್ :- ಮಾನ್ಯ ಅಧ್ಯಕ್ಷರೇ, ಯಾರೇ ದೊಡ್ಡವರಾಗಲಿ, ನಾವು ಕ್ರಮ ತೆಗೆದು ಕೊಳ್ಳುತ್ತೇವೆ. ಈಗಾಗಲೇ ಅಂಗನವಾಡಿ ಕಾರ್ಯಕರ್ತೆಯವರ ಮೇಲೆ ನಡೆದಂತಹ ಹಲ್ಲೆಯ ಮೇಲೆ ಸಾಕಷ್ಟು ಪ್ರಸ್ತಾಪ ಈ ಸದನದಲ್ಲಿ ಆಗಿದೆ. ವಿರೋಧ ಪಕ್ಷದ ಉಪನಾಯಕರು ಕೂಡ ಪ್ರಸ್ತಾಪ ಮಾಡಿದ್ದಾರೆ. ಇದರಲ್ಲಿ ಯಾರೆ ಇರಲಿ, ಯಾರು ತಪ್ಪಿತಸ್ಥರು ಇದ್ದಾರೆ ಅವರ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀಮತಿ ದಮಯಂತಿ ಬೋರೇಗೌಡ :- ಇದುವರೆಗೂ ಏನೂ ಕ್ರಮ ತೆಗೆದುಕೊಂಡಿಲ್ಲ. ಮೂರುವಾರ ಆಗಿ ಹೋಗಿದೆ.

ಶ್ರೀಮತಿ ಮಲ್ಲಾಜಮ್ಮ :- ಮಾನ್ಯ ಅಧ್ಯಕ್ಷರೇ, ಕಮಲಮ್ಮನವರ ಪತಿಯವರು ಪೋಸ್ಟ್ ಆಫೀಸ್‌ನಲ್ಲಿ ಕೆಲಸ ಮಾಡುತ್ತಾರೆ. ಅವರಿಗೆ ಆ ವಿಚಾರ ಗೊತ್ತಾದ ತಕ್ಷಣವೇ ಮನೆಗೆ ಬರುವುದರೊಳಗಾಗಿ ಇವರನ್ನು ವಿದ್ಯುತ್ ಕಂಬಕ್ಕೆ ಕಟ್ಟಿಹಾಕಿ, ಬೆತ್ತಲೆಯಲ್ಲಿ ನಿಲ್ಲಿಸಿರತಕ್ಕಂಥದ್ದನ್ನು ಅವರು ನೋಡಿ ಪ್ರತಿಭಟಿಸಿದಾಗ, ಅವರ ಪತಿಗೂ ಕೂಡ ಥಳಿಸಿದ್ದಾರೆ ಎನ್ನತಕ್ಕದ್ದು ಪತ್ರಿಕೆಯಲ್ಲಿ ವರದಿಯಾಗಿದೆ. ಅವರು ಕೂಡಲೇ ಆ ವ್ಯಾಪ್ತಿಗೆ ಬರತಕ್ಕಂಥ ಪೋಲೀಸ್ ಸ್ಟೇಷನ್ನಿಗೆ ದೂರನ್ನುಕೊಟ್ಟಿದ್ದರೂ ಕೂಡ, ಸಂಬಂಧಪಟ್ಟಂತಹ ಜಿಲ್ಲಾಧಿಕಾರಿಗಳೇ ಆಗಲಿ, ಅಥವಾ ಪೋಲೀಸ್ ವರಿಷ್ಠಾಧಿಕಾರಿಗಳೇ ಆಗಲಿ ಭೇಟಿ ಕೊಟ್ಟು ಇದರ ಬಗ್ಗೆ ಸೂಕ್ತ ಕ್ರಮವನ್ನು ಇದುವರೆಗೂ ತೆಗೆದುಕೊಂಡಿಲ್ಲ ಎನ್ನುವುದು ಪತ್ರಿಕೆಯ ವರದಿಯಲ್ಲಿದೆ. ಈ ಸದನದ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು, ಮತ್ತು ಗೃಹಮಂತ್ರಿಗಳನ್ನು ಹಾಗೂ ಸಮಾಜ ಕಲ್ಯಾಣ ಸಚಿವರನ್ನು ನಾನು ಕೇಳುವುದು ಇಷ್ಟೆ. ಇದರ ತಪ್ಪಿತಸ್ಥರು ಯಾರೇ ಆಗಿರಲಿ, ಅವರನ್ನು ಕಠಿಣ ಶಿಕ್ಷೆಗೆ ಒಳಪಡಿಸಿ ಅವರನ್ನು ಕೂಡಲೇ ಅರೆಸ್ಟ್ ಮಾಡತಕ್ಕಂಥ ಕೆಲಸವನ್ನು ತಾವು ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಒತ್ತಾಯಪಡಿಸುತ್ತೇನೆ.

ಶ್ರೀ ಧರ್ಮಸಿಂಗ್ :- ಯಾರು ತಪ್ಪಿತಸ್ಥರು ಇದ್ದಾರೆ, ಅವರ ಮೇಲೆ ಸರಿಯಾದಂತಹ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತದೆ. ಪೋಲೀಸ್ ಇಲಾಖೆಯವರೊಂದಿಗೆ ಸಂಪರ್ಕವನ್ನು ಇಟ್ಟುಕೊಂಡು ತಪ್ಪಿತಸ್ಥರಿಗೆ ಶಿಕ್ಷೆಯನ್ನು ಕೊಡುತ್ತೇವೆ.

ಶ್ರೀಮತಿ ರೇಣುಕಾ ರಾಜೇಂದ್ರನ್ :- ತಪ್ಪು ಮಾಡುತ್ತಿರುವ ಪೋಲೀಸ್ ಅಧಿಕಾರಿಗಳನ್ನು ಅಮಾನತ್ತಿನಲ್ಲಿಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿದೆಯೇ?

ಶ್ರೀ ಧರ್ಮಸಿಂಗ್ :- ತಾವು ಹೇಳಿದ್ದೀರಿ. ಸರಿಯಾದಂತಹ ರೀತಿಯಲ್ಲಿಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಕರಿಯಣ್ಣ :- ಮಾನ್ಯ ಅಧ್ಯಕ್ಷರೇ, ಇದು ಪತ್ರಿಕೆಯಲ್ಲಿ ಬಂದಿದೆ, ಮೂರುವಾರಗಳು ಆಗುತ್ತಾ ಬಂದಿದೆ. ಆಕೆಯನ್ನು ಬೆತ್ತಲೆಗೊಳಿಸಿದ್ದಾರೆ. ಕಂಬಕ್ಕೆ ಕಟ್ಟಿದ್ದಾರೆ. ಇಂತಹ ಅಮಾನುಷ ಕೃತ್ಯವಾದರೂ ಸಹಿತ ಇದುವರೆಗೂ ಸರ್ಕಾರಕ್ಕೆ ಒಂದು ವರದಿಯನ್ನು ಮಾಡಲಿಲ್ಲ. ಪತ್ರಿಕೆಯಲ್ಲಿ ಬಂದರೂ ಸಹಿತ, ಇದು ಹೌದು,

ಅಲ್ಲ, ಏನಾಗಿದೆ ಎನ್ನತಕ್ಕದ್ದನ್ನು ಸರ್ಕಾರಕ್ಕೆ ವರದಿ ಮಾಡದೇ ಇರತಕ್ಕಂಥ ಅಧಿಕಾರಿಗಳು ಅಲ್ಲಿ ಇದ್ದಾರೆ. ವರದಿಯನ್ನು ತರಿಸಿಕೊಳ್ಳುತ್ತೇವೆಂದು ಹೇಳಿದ್ದೀರಿ. ಇದು ಸಾಮಾನ್ಯವಾಗಿ ನಡೆಯುತ್ತಿರುತ್ತದೆ. ಎನ್ನುವಂತಹ ಉತ್ತರವನ್ನು ನಿಮ್ಮ ಸಮಾಜ ಕಲ್ಯಾಣ ಅಧಿಕಾರಿಗಳು ಕೊಟ್ಟರೆ ಇನ್ನು ಮಹಿಳೆಯರು ಅಥವಾ ಅಂಗನವಾಡಿಯ ಕಾರ್ಯಕರ್ತರು ಹೇಗೆ ಬದುಕುವುದಕ್ಕೆ ಆಗುತ್ತದೆ ತಾವು ಹೇಳಿ? ದೂರನ್ನು ಕೊಟ್ಟರೂ ಸಹಿತ ದೂರನ್ನು ತೆಗೆದುಕೊಳ್ಳಲಿಲ್ಲ ಎಂದು ವರದಿಯಾಗಿದೆ. ಅದು ಸುಳ್ಳು ಹೌದೋ ಅಲ್ಲವೋ ಎಂಬುದರ ಬಗ್ಗೆ ವರದಿಯನ್ನು ಅಧಿಕಾರಿಗಳು ಸರ್ಕಾರಕ್ಕೆ ಕಳುಹಿಸುವುದಕ್ಕೆ ಮೂರು ವಾರಗಳು ಬೇಕು ಅಂತ ಅಂದರೆ ಇನ್ನು ಮಹಿಳೆಯವರು ಹೇಗೆ ಬದುಕುವುದಕ್ಕೆ ಸಾಧ್ಯವಾಗುತ್ತದೆ? ಈ ರೀತಿ ಅಂಟ್ರಾಸಿಟಿಗಳು ನಡೆದರೆ ಯಾವ ರೀತಿ ಬದುಕುವುದಕ್ಕೆ ಆಗುತ್ತದೆ? ಸರ್ಕಾರ ಈ ರೀತಿ ನಿದ್ರೆ ಮಾಡುತ್ತಿದ್ದರೆ ಹೇಗೆ? ಪೋಲೀಸ್ ಅಧಿಕಾರಿಗಳು ಇನ್ನೂ ನಿದ್ರೆ ಮಾಡುತ್ತಿದ್ದಾರೆ.

ಶ್ರೀ ಧರ್ಮಸಿಂಗ್ :- ಮಾನ್ಯ ಅಧ್ಯಕ್ಷರೇ, ಇದು ನಿಜವಾಗಿಯೂ ನನಗೆ ಇವತ್ತು ಗೊತ್ತಾಗಿದೆ. ಮುಚ್ಚುಮರೆ ಇಲ್ಲದೆ ಸ್ಪಷ್ಟವಾದ ಉತ್ತರ ಹೇಳಬೇಕಾದರೆ ಮೂರು ವಾರಗಳ ಹಿಂದೆ ಈ ಘಟನೆಯಾದರೂ ಕೂಡ ಏತಕ್ಕೆ ಮುಚ್ಚಿಟ್ಟಿದ್ದಾರೆ ಎಂಬುದರ ಬಗ್ಗೆ ವರದಿಯನ್ನು ತರಿಸುತ್ತೇನೆ. ಯಾರೇ ಪೋಲೀಸ್ ಅಧಿಕಾರಿಗಳೇ ಇರಲಿ, ನಮ್ಮ ಅಧಿಕಾರಿಗಳೇ ಇರಲಿ, ಯಾರು ತಪ್ಪಿತಸ್ಥರು ಇದ್ದಾರೆ ಅವರ ಬಗ್ಗೆ ಸರ್ಕಾರ ಖಂಡಿತವಾಗಿಯೂ ಕ್ರಮ ತೆಗೆದುಕೊಳ್ಳುತ್ತದೆ. ನಾವು ಯಾರನ್ನೂ ಸ್ಪೇರ್ ಮಾಡುವುದಿಲ್ಲ.

ಮೈಸೂರು ಸುತ್ತಮುತ್ತ ನಡೆಯಿತೆನ್ನಲಾದ ಸ್ಫೋಟ

ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜ) :- ಮಾನ್ಯ ಅಧ್ಯಕ್ಷರೇ, ನಿನ್ನೆ ಸುಮಾರು ಐದು ಗಂಟೆಯ ಸಮಯದಲ್ಲಿ ಮೈಸೂರು, ನಂಜನಗೂಡು ಮತ್ತು ಶ್ರೀರಂಗಪಟ್ಟಣದ ಸುತ್ತಮುತ್ತಲೂ ಭಾರಿ ಶಬ್ದ ಭೂಕಂಪದ ರೀತಿಯಲ್ಲಿ ಆಯಿತು. ಈ ಶಬ್ದದಿಂದ ಆದಂತಹ ಅನಾಹುತದಿಂದ ಇಡೀ ನಗರದಲ್ಲಿ ಜನತೆಯು ಭಯಭೀತರಾಗಿ ಓಡಿಬಂದಿದ್ದಾರೆ. ನಂಜನಗೂಡು ಮತ್ತು ಮೈಸೂರು ನಗರಗಳಲ್ಲಿ ಕಿಟಕಿಯ ಗಾಜುಗಳು ಒಡೆದು ಹೋಗಿದೆ ಮತ್ತು ವೈರ್‌ಮೆಷ್‌ಗಳು ಬೆಂಡಾಗಿವೆ. ವಾಹನಗಳನ್ನು ಓಡಿಸುವ ಚಾಲಕರು ವಾಹನಗಳಿಂದ ಇಳಿದು ಹೊರಗೆ ಓಡಿ ಹೋಗಿದ್ದಾರೆ. ಇದು ಭೂಕಂಪವೋ, ಇದು ಒಂದು ಆಸ್ಫೋಟವೋ, ಇದು ವಿದೇಶಿ ಕೈವಾಡವೋ ಅಥವಾ ಇದು ವಿಧ್ವಂಸಕ ಕೃತ್ಯವೋ ಎಂಬುದು ಗೊತ್ತಾಗುತ್ತಿಲ್ಲ. ಏಕೆಂದರೆ ಬೆಳಿಗ್ಗೆ ನನ್ನ ಕಚೇರಿಗೆ ಮೈಸೂರಿನಿಂದ ದೂರವಾಣಿ ಕರೆ ಬರುತ್ತಿದೆ. ಇವತ್ತು ಕೂಡ ಏನಾಗುತ್ತಿದೆ, ಏನಾಗಬಹುದು ಎಂಬ ಭಯ ಮೈಸೂರಿನಲ್ಲಿ ನಿರ್ಮಾಣವಾಗಿದೆ. ಒಂದು ಪತ್ರಿಕೆಯಲ್ಲಿ ಸ್ಫೋಟವೆಂದೂ ಮತ್ತೊಂದರಲ್ಲಿ ಇದು ಭೂಕಂಪವೆಂದು ಹೇಳಿದ್ದಾರೆ. ಇದರ ಬಗ್ಗೆ ನಾನು ಅಧಿಕಾರಿಗಳನ್ನು ಕೇಳಿದಾಗ ಇದು ಭೂಕಂಪವೇ ಅಥವಾ ಅಲ್ಲವೇ ಎಂಬುದು ಗೊತ್ತಾಗುತ್ತಿಲ್ಲ ಎಂದು ಹೇಳಿದರು. ಆದರೆ ನಾನು ಸರ್ಕಾರವನ್ನು ಕೇಳುತ್ತೇನೆ. ಇಲ್ಲಿ ಪರಿಸರ ಖಾತೆಯ ಮಂತ್ರಿಗಳು ಇದ್ದಾರೆ. ವಿಜ್ಞಾನ ಖಾತೆಯ ಮಂತ್ರಿಗಳು ಇದ್ದಾರೆ, ಶಬ್ದ, ನೀರು,ಗಾಳಿ, ಎಲ್ಲದಕ್ಕೂ ಇಲ್ಲಿ ಮಂತ್ರಿಗಳು ಇದ್ದಾರೆ. ಇವರು ನನಗೆ ಮಾಹಿತಿ ಕೊಡಬೇಕು. ಇಡೀ ನಗರದ ಜನತೆಯು ಭಯಭೀತರಾಗಿದ್ದಾರೆ. ಅವರಿಗೆ ಸರಿಯಾದಂತಹ ಮಾರ್ಗದರ್ಶನ ಕೊಡಬೇಕು, ಸಾಂತ್ವನ ಹೇಳುವಂತಹ ಜವಾಬ್ದಾರಿ ಸರ್ಕಾರದ್ದು. ಆದುದರಿಂದ ತಮ್ಮ ಮೂಲಕ ನಾನು ತಿಳಿಯಪಡಿಸುತ್ತೇನೆ. ಇದಕ್ಕೆ ಸ್ಪಷ್ಟವಾದ ಕಾರಣವೇನು; ಇದು ವಿದೇಶಿ ಕೈವಾಡವೇ, ಇದು ವಿಧ್ವಂಸಕ ಕೃತ್ಯವೇ ಇಲ್ಲ ಭೂಕಂಪವೇ ಎಂಬ ಬಗ್ಗೆ ನಮಗೆ ತಿಳುವಳಿಕೆ ಕೊಡಬೇಕೆಂದು ಮುಖ್ಯಮಂತ್ರಿಗಳನ್ನು ಹಾಗೂ ಸಂಬಂಧಪಟ್ಟ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಅಲ್ಲಿ ಜನರು ಗಾಭರಿಯಾಗಿದ್ದಾರೆ. ಸರ್ಕಾರ ಸ್ಪಷ್ಟವಾದ ಹೇಳಿಕೆಯನ್ನು ಕೊಡಬೇಕು; ಶಾಂತಿ ವಾತಾವರಣವನ್ನು ನಿರ್ಮಾಣ ಮಾಡುವಂತಹ ಜವಬ್ದಾರಿ ಸರ್ಕಾರದ್ದು. ಈ ನಿಟ್ಟಿನಲ್ಲಿ ಸರ್ಕಾರ ಹೇಳಿಕೆಯನ್ನು